doc-527
T-F-2

ಶ್ರೀ ಗೋರಕ್ಷಣಿ
GORAKSHANA

8 ನೇ ವರ್ಷ — 1958 ನೇ ಜನವರಿ ತಾ || 23 January 58

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೊಂಬಲಿಗರಾಗಿರಿ

ಗೋರಕ್ಷಣೆ, ಪಶ್ರಾಣಿದಯೆ, ಪಶುವೈದ್ಯ ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ರೂ 10 (ಒಂದೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಗೋಹತ್ಯನಿರೋಧ ಸಮ್ಮೇಳನ

ಪಾಗ್ಪೋತಿವುರ 18— ಕಾಂಗ್ರೆಸ್ಸು ಅಧಿವೇಶನ ನಡೆಯುತ್ತಿದ್ದ ಸ್ಥಳಕ್ಕೆ ಸ್ವಲ್ಪ ಹತ್ತಿರದಲ್ಲಿ ನಡೆದ ಅಖಿಲ ಅಸ್ಸಾಂ ಗೋವಧನಿರೋಧ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಆರ್ಯ ಸಮಾಜ ನಾಯಕ ಶ್ರೀ ಘನಶ್ಯಾಂಸಿಂಗ್ ಗುಪ್ತರವರು ಮಾಡಿದ ಭಾಷಣದಲ್ಲಿ — ರಾಜ್ಯಾಂಗದಲ್ಲಿ ಕಟ್ಟು ಮಾಡಿರುವಂತೆ ದೇಶಾದ್ಯಂತ ಗೋವಧನಿರೋಧ ಶಾಸನವನ್ನು ಜಾರಿಮಾಡಲು ಭಾರತ ಸರಕಾರವನ್ನು ಒತ್ತಾಯಪಡಿಸಿದರು ; ಮತೀಯವಾಗಿಯೂ ಸಾಂಸ್ಕೃತಿಕವಾಗಿಯೂ ಆರ್ಥಿಕವಾಗಿಯೂ ವೈದ್ಯ ಆರೋಗ್ಯ ದೃಷ್ಟಿಯಿಂದಲೂ ಗೋಸಂರಕ್ಷಣೆಯು ಆವಶ್ಯಕವಾಗಿದೆ ಎಂದು ತಿಳಿಸಿದರು ; ಗೋಹತ್ಯನಿರೋಧವನ್ನು ಶಾಸನ ಮೂಲಕ ದೇಶಾದ್ಯಂತ ಜಾರಿಮಾಬೇಕೆಂದು ಹೇಳಿದರು : ಈ ಕೇಳಿಕೆಯೊಡನೆ ಮತೀಯ ವಿಷಯವನ್ನು ಗಂಟುಹಾಕಬಾರದೆಂದೂ, ಮುಸ್ಲಿಂ ಚಕ್ರವರ್ತಿಗಳಾದ ಬಾಬರ್ ಮತ್ತು ಅಕ್ಬರ್ ಗೋಹತ್ಯನಿರೋಧಿಸಿದ್ದರೆಂದೂ, ಈ ತಕ್ಸೀರು ನಡೆಸಿದವರಿಗೆ ಶಿಕ್ಷಿಸುತ್ತಿದ್ದರೆಂದೂ ಹೇಳಿದರು

ಜಾನುವಾರು ರೈತನ ಬೆನ್ನುಮೂಳೆ

ಹೊಸನಗರ ಡಿ 31— ಜಾನುವಾರುಗಳೇ ರೈತನ ಬೆನ್ನುಮೂಳೆಯೆಂದೂ, ಜಾನುವಾರುಗಳ ವಿಚಾರದಲ್ಲಿ ಶ್ರದ್ಧೆ ವಹಿಸಿ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಸಹಾಯದಿಂದ ವ್ಯವಸಾಯಗಾರರು ಹೆಚ್ಚಿಗೆ ಉಪಯೋಗವನ್ನು ಪಡೆಯಬೇಕೆಂದೂ ನಾಗರಹಳ್ಳಿ ಜಾನುವಾರು ಜಾತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ, ಜಿಲ್ಲಾ ಕಾಂಗ್ರೆಸ್ಸು ಅಧ್ಯಕ್ಷರಾದ ಶ್ರೀ ಬದ್ರೀ ನಾರಾಯಣ್ ರವರು ಹೇಳಿದರು.

ಪಶು ಸಂಗೋಪನ

ಪಶು ಸಂಗೋಪನೆಗೆ ಸಂಬಂಧಿಸಿ 1957-58 ರಲ್ಲಿ ಕಾರ್ಯಗತವಾಡುವುದಕಾಗಿ ಮೈಸೂರು ಸರ್ಕಾರವು ಈ ಕೆಳಗಿನ ಯೋಜನೆಗಳನ್ನು ರೂಪಿಸಿದೆ

1 ರಾಜ್ಯ ಮಟ್ಟದಲ್ಲಿ ದನಕರುಗಳ ಪ್ರದರ್ಶನವೊಂದನ್ನು ಪ್ರಚಲಿತ ವರ್ಷದಲ್ಲಿ 10000 ರೂ. ವೆಚ್ಚದಿಂದ ಏರ್ಪಡಿಸುವುದು.

2 ಬಂಡು ದನಗಳನ್ನು ನಗರ ಮತ್ತು ಪಟ್ಟಣಗಳಿಂದ ಬೇರೆಬೇರೆ ಕಡೆಗೆ ಸಾಗಿಸುವುದಕ್ಕಾಗಿ 1957-58 ರಲ್ಲಿ ರೂ. 37400 ವೆಚ್ಚದ ಯೋಜನೆ

3 ಸುಮಾರು ರೂ. 43600 ಅಂದಾಜು ವೆಚ್ಚದಿಂದ ಗೋಧನವೊಂದನ್ನು ತೆರೆಯುವುದು

4 ಬೆಂಗಳೂರಿನಲ್ಲಿ ಮತ್ತು ಕೂಡಿಗೆಯಲ್ಲಿ ಹಾಲಿನ ಪೌಡರ್‌ಕೆಯನ್ನು ಅಭಿವೃದ್ಧಿಗೊಳಿಸುವ ಯೋಜನೆ ; ಬೆಂಗಳೂರು ಯೋಜನೆಗೆ ರೂ. 104000 ಮತ್ತು ರೂ. 103600 ವೆಚ್ಚದ ಅಂದಾಜು.

ರಾಜ್ಯದಲ್ಲೊಂದು ಪಶುವೈದ್ಯ ಕಾಲೇಜನ್ನು ತೆರೆಯಬೇಕೆಂದು ರಾಜ್ಯ ಸರಕಾರವು ಈಗಾಗಲೇ ನಿರ್ಧರಿಸಿದೆ : ಈ ಕಾಲೇಜಿಗೆ ಭಾರತ ಸರಕಾರದ ಸಹಾಯವು 28 ಲಕ್ಷ ರೂಗಳಿಗೆ ನಿಯಮಿತವಿದೆ

— ಮೈಸೂರು ವಾಣಿ

ಗೋವಧೆ ನಿರೋಧ

ಅಹಮದಾಬಾದಿನಲ್ಲಿ ಗೋಹತ್ಯ ನಿರೋಧವು ಜ. 20 ನೇ ತಾರೀಖಿನಿಂದ ಜಾರಿಗೆ ಬಂದಿದೆ.

ಗೋ ಸಂಪತ್ತನ್ನು ಉತ್ತಮಗೊಳಿಸಬೇಕು

ಕೋಲಾರ — ದೊಡ್ಡ ಬಳ್ಳಾಪುರ ತಾಲ್ಲೂಕಿನ ಘಾಟಿಯಲ್ಲಿ ದನಗಳ ಮತ್ತು ವ್ಯವಸಾಯ ಪ್ರದರ್ಶನವನ್ನು ಕೇಂದ್ರದ ವ್ಯವಸಾಯ ಶಾಖಾ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಉದ್ಘಾಟಿಸುತ್ತಾ — ನಮ್ಮ ದೇಶದ ಗ್ರಾಮಗಳ ಆರ್ಥಿಕ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಗೋಸಂಪತ್ತನ್ನು ಉತ್ತಮಗೊಳಿಸಬೇಕೆಂದರು — ಭಾರತದ ಆರ್ಥಿಕ ಜೀವನದಲ್ಲಿ ಗೋಸಂಪತ್ತಿನ ಪ್ರಾಮುಖ್ಯತೆ ವಿಷಯವನ್ನು ಒತ್ತಿ ಹೇಳಿದರು ; ಎರಡನೇ ಯೋಜನೆಯಲ್ಲಿ 52 ಕೋಟಿ ರೂಗಳು ಗೋ ಸಂಪತ್ತಿನ ಅಭಿವೃದ್ಧಿಗಾಗಿ ಖರ್ಚು ಮಾಡಲಿರುವ ಭಾರತ ಸರಕಾರದ ಕಾರ್ಯಕ್ರಮವನ್ನು ವಿವರಿಸಿದರು — ಈ ದನಗಳ ಪಂತೆಗೆ 50 ಸಾವಿರ ದನಗಳು ಬಂದಿದ್ದವು — ಬೆಂಗಳೂರು ಗೋಕುಲದ ಶ್ರೀ ಎಂ. ಎಸ್ ರಾಮಯ್ಯನವರ ಉದಾರ ಸಹಾಯದ ಪಶು ವೈದ್ಯ ಶಾಲೆಯ ಅಸ್ಥಿಭಾರಶಿಲೆಯನ್ನು ಶ್ರೀ ಕೃಷ್ಣಪ್ಪನವರು ಹಾಕಿದರು

ಪಶುವೈದ್ಯಶಾಲೆ ಪ್ರಾರಂಭೋತ್ಸವ

ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಶ್ರೀ ಕೆ ಆರ್. ತೋಪಯ್ಯನವರು ಉದಾರ ದಾನವಾಗಿತ್ತ ಪಶುವೈದ್ಯಶಾಲೆಯ ಪ್ರಾರಂಭೋತ್ಸವವನ್ನು ಶ್ರೀ ಕೃಷ್ಣಪ್ಪನವರು ಮಾಡಿದರು

ಅಖಿಲ ಭಾರತ ಗೋರಕ್ಷಣ ಮಂಡಲಿ (ದಕ್ಷಿಣ ಭಾರತ ಶಾಖೆ) ಯ ಡಾ|| ಪಿ ಎಸ್ ನಾರಾಯಣರ ಪ್ರಾಣಿದಯಾ ಕಾರ್ಯದಿಂದ ಅನೇಕ ಕಡೆ ದೇವಂ ಜಾತ್ರೆಗಳಲ್ಲಿ ಪ್ರಾಣಿವಧೆ, ಮಾಂಸಮಾರಾಟ ನಿಲಿಟು ಹೋಟೆಲುಗಳು ನಿಲ್ಲಿಸಲ್ಪಟ್ಟಿವೆ ಎಲ್ಲ ಕಡೆಯಲ್ಲೂ ನಿಲ್ಲಿಸಲು ಇವರು ಶ್ರಮಿಸುತ್ತಿರುವುದು ಸ್ತುತ್ಯವೆ

ಪಶುಪಾಲನೆಯಲ್ಲಿ ತರಬೇತು

ನವದೆಹಲಿ 21 — ಮಧ್ಯಪ್ರದೇಶ ಮತ್ತು ಮುಂಬೈನ ಬೇಸಾಯ ಮತ್ತು ಪಶುವೈದ್ಯ ಸಂಸ್ಥೆಗಳು 6 ಮಂದಿ ಉಮೇದುವಾರರನ್ನು, ಅಮೇರಿಕಾದಲ್ಲಿ ಇಲಿನಾಯ್ಸ್ಯುನಿವರ್ಸಿಟಿ ಮತ್ತು ಕಾಲೇಜ್ ಸ್ಟೇಟ್ ಕಾಲೇಜಿನಲ್ಲಿ ಒಂದು ವರ್ಷಗಳ ವಿಶೇಷ ತಂಜೀತಿಯನ್ನು ಪಡೆಯುವದಕ್ಕೋಸ್ಕರವಾಗಿ ಆರಿಸಿದೆ

ಪಶುವೈದ್ಯ

ಹಸುಗಳು ಜಾವಾಳಬೀಜ ಮತ್ತು ಶೈಲ ಸೇವಿಸಿದ್ದರೆ—

ಚಿಹ್ನೆಗಳು— ಹೊಟ್ಟೆನೋವು, ರಕ್ತ ವಿಶ್ರವಾದ ಭೇದಿ, ಸುಸ್ತು, 1-2 ದಿನಗಳವರೆಗೂ ನರಳಿ ಸಾಯುವುದು.

ಚಿಕಿತ್ಸೆ— ಹಾಲು, ಗಂಜಿ, ಕೋಳಿ ಮೊಟ್ಟೆ, ಅಫೀಮು ಇವುಗಳನ್ನು ಅಂತಿಮ ವರಿಕು ದಿನವೊಂದಕ್ಕೆ 2 - 3 ಔನ್ಸ್ ಕೊಡುವುದು.

ಅಮೃತದಾತೆ ಗೋವಾತೆ

[ಸೋವಿಯಟ್ ಕ್ಷೀರಶಾಲೆಯ ಕಾರ್ಯಕರ್ತೆ ತನ್ನ ಅನುಭವಗಳನ್ನು ಭಾರತೀಯ ರೈತರೊಡನೆ ಪಾಲುಗೊಳ್ಳುತ್ತಿದ್ದಾಳೆ]

— ಪಿ. ವೈತ್ಸೆಖೋವ್‌ಸ್ಕಿ —

ಸೋವಿಯತ್ ಒಕ್ಕೂಟದ ಕೃಷಿ ಪ್ರದರ್ಶನಾಲಯದ ಪಶು ಪೋಷಣಾ ವಿಭಾಗದಲ್ಲಿ, ಭಾರತೀಯ ಸಂದರ್ಶಕರು ಹುಲ್ಕೈನಿನ ಗೋಪಾಲಕಿ ಮರಿಯಾ ಸಾವ್‌ಚೆಂಕೋವಳು ಹೇಳಿದುದನ್ನು ಕುತೂಹಲದಿಂದ ಆಲಿಸಿದರು. ಹೆಚ್ಚು ಹಾಲು ಪಡೆಯುವುದರಲ್ಲಿ ನಿಪುಣೆಯಾದ ಈ ಮಹಿಳೆ ಏನು ಹೇಳುತ್ತಾಳೆ ಎಂಬುದನ್ನು ತಿಳಿಯಲು ಯಾವ ರೈತನಿಗೂ ಆಸಕ್ತಿ ಇದ್ದೇ ತೀರುತ್ತದೆ. ಅವಳು ಸಾಕುತ್ತಿರುವ ಎಂಟು ಹಸುಗಳಲ್ಲಿ ಪ್ರತಿಯೊಂದರಿಂದಲೂ 8 ಸಹಸ್ರ ಕಿಗ್ರಾಂ ಹಾಲು ಪಡೆಯುತ್ತಾಳೆ. ವಿಶೇಷವಾಗಿ ಆ ಹಸುಗಳಲ್ಲಿ ರೆಡ್ಡಿಯಾ (ಚಿಮ್ಮಿ) ಎಂಬ ಗೋವು ಪ್ರತಿದಿನವೂ 43 ಲೀಟರ್ಸಿನವರಿಗೆ ಹಾಲು ಕೊಡುತ್ತದೆ

ನಾನು ಮರಿಯಾ ಸಾವ್‌ಚೆಂಕೋಳೊಡನೆ ಅವಳ ಈ ಯಶಸ್ಸಿನ ಗುಟ್ಟನ್ನು ತಿಳಿಸಬೇಕೆಂದು ಕೇಳಿಕೊಂಡೆನು.

" ನನ್ನಲ್ಲಿ ಗುಟ್ಟೇನೂ ಇಲ್ಲ. ನಾನು ಪ್ರತಿಯೊಬ್ಬ ಪಶುಪಾಲಕನೂ ತಿಳಿದಿರುವ ಮೂರು ನಿಯಮಗಳನ್ನು ಪಾಲಿಸುತ್ತೇನೆ ; ಪಶುಗಳಿಗೆ ಸರಿಯಾಗಿ ಆಹಾರವೀಯುತ್ತೇನೆ ; ಒಂದೊಂದರ ವೈಯಕ್ತಿಕ ವಿಶಿಷ್ಟ ಗುಣಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಉತ್ತಮ ಆರೈಕೆ ಮಾಡುತ್ತೇನೆ ಮತ್ತು ಎಳೆಯ ಹಸುಗಳ ಹಾಲು ಕರೆಯುವಾಗ ಸರಿಯಾದ ರೀತಿಯಲ್ಲಿ ಕರೆಯುತ್ತೇನೆ ' ಎಂದು ಅವಳು ಹೇಳಿದಳು

' ಯಾವುದನ್ನು ನೀವು ಉತ್ತಮ ಆಹಾರವೆಂದು ಪರಿಗಣಿಸುತ್ತೀರಿ ? '

' ನನ್ನ ತಂದೆಯವರು ಯಾವಾಗಲೂ ಹೇಳುತ್ತಿದ್ದರು : ' ಹಸುವಿನ ಹಾಲು ಅದ್ದೂ ನಾಲಿಗೆಯ ಮೇಲಿದೆ ' ಎಂದು ; ಅವರು ಹೇಳುತ್ತಿದ್ದುದು ಸರಿ ; ಹೆಚ್ಚು ಪ್ರಮಾಣದ ಆಹಾರವು ಹಾಲಿನ ಹುಟ್ಟುವಳಿಯನ್ನು ಹೆಚ್ಚಿಸುತ್ತದೆ ; ಆದರೆ ಆ ಆಹಾರವು ಒಳ್ಳೆಯ ತರಹೆಯದಾಗಿರಬೇಕು ; ಇಲ್ಲದಿದ್ದರೆ ಹಸುವು ನಿಮ್ಮ ಲಾಭವನ್ನು ಲಪಟಾಯಿಸುವುದು.

' ನಾನು ನನ್ನ ದನಗಳಿಗೆ ಮೇವು ಸಮೃದ್ಧವಾಗಿ ಕೊಡುತ್ತೇನೆ : ಹಾಲಿನ ಉತ್ಪತ್ತಿ ಹೆಚ್ಚಿದಂತೆ ಮೇವನ್ನೂ ಹೆಚ್ಚಿಸುತ್ತೇನೆ ; ಆದರೆ ಹಾಲು ಕಡಮೆಯಾಯಿತೆಂದರೆ ಒಂದು ಗ್ರಾಂ ಕೂಡಾ ಹೆಚ್ಚಿಗೆ ಹುಲ್ಲು ಕೊಡುವುದಿಲ್ಲ ; ಚಳಿಗಾಲದಲ್ಲಿ ದನಗಳು ಕೊಟ್ಟಿಗೆಯಲ್ಲಿರುವಾಗ ರಸವತ್ತಾದ, ಕ್ಷೀರೋತ್ಪಾದಕ ಮೇವನ್ನೂ, ಬೇಸಿಗೆಯಲ್ಲಿ ಹುಲ್ಲನ್ನೂ ಹೆಚ್ಚಾಗಿ ತಿನ್ನುವಂತೆ ಹಸುಗಳಿಗೆ ಅಭ್ಯಾಸ ಮಾಡಿಸಿದ್ದೇನೆ ; ಚಳಿಗಾಲದಲ್ಲಿ ನಾನು ಕೊಡುವ ದೈನಂದಿನ ಪಡಿಯು ಹಬೆಯಲ್ಲಿ ಬೆಂದ ತೌಡು ಅಥವಾ ಬೇರೆ ಯಾವುದಾದರೂ ಬಲವರ್ಧಕಗಳನ್ನು ಕೂಡಿಸಿ ರುಚಿಕರವಾಗಿರುವಂತೆ ಮಾಡಿದ, ಎಂಟರಿಂದ ಹತ್ತು ಕಿಲೋಗ್ರಾಂನಷ್ಟು ಒಣ ಹುಲ್ಲನ್ನೂ, ಕಾಳಿನ ತೆನೆಗಳಿಂದ ತಯಾರಿಸಿದ 35 ಕಿಲೋಗ್ರಾಂ ಮೇವನ್ನೂ ಮತ್ತು ಹತ್ತು ಕಿಲೋಗ್ರಾಮಿನಷ್ಟು ಕೊಚ್ಚಿದ ಬೀಟ್ ಗೆಡ್ಡೆಯನ್ನೂ ಒಳಗೊಂಡಿರುತ್ತದೆ ; ತೌಡು ಅಥವಾ ಬಡಿದ ಕಾಳಿನಂತಹ ಬಲವರ್ಧಕಗಳು, ಹಾಲಿನ ಉತ್ಪತ್ತಿಗನುಸಾರವಾಗಿ ಕೊಡಲ್ಪಡುವುವು ; ಹತ್ತು ಕಿಲೋಗ್ರಾಂ ಹಾಲಿಗೆ ದಿನಾಲು ನಾನು 100 ಗ್ರಾಂಗಳಷ್ಟು ಶಕ್ತಿವರ್ಧಕವನ್ನೂ, 15 ಕಿಲೋಗ್ರಾಂ ಉತ್ಪತ್ತಿಗೆ 150 ಗ್ರಾಂಗಳಷ್ಟು ಮತ್ತು ಹೀಗೇ ಪ್ರಮಾಣಾನುಸಾರ ಹಸುಗಳಿಗೆ ಮೇವು ಕೊಡುತ್ತೇನೆ ' [ಮಿಕ್ಕಿದ್ದು ಮುಂದಿನ ಸಂಚಿಕೆಯಲ್ಲಿ]

— ಸೋವಿಯಟ್ ದೇಶ

ಮೋಟಾರು ವಾಹನಗಳ
ಅವಶ್ಯಕ ವಿಮಾ

ಕಾಂಪ್ರಹೆನ್ಸಿವ್ ಪಾಲಿಸಿಗಳಿಗೆ

ಅತಿ ಸುಲಭವಾದ ದರಗಳನ್ನೂ
ಮತ್ತಿತರ ವಿಧವಿಧವಾದ ಆಕರ್ಷಕ ಪರತ್ತುಗಳನ್ನೂ

ಎಲ್ಲಾ ತರಹ ಮೋಟಾರು ವಾಹನಗಳಿಗೆ
ನಾವು ಕೊಡುತ್ತೇವೆ.

ವಿವರಗಳಿಗೆ:—

ಕಾರ್ಯದರ್ಶಿ

ಮೈಸೂರು ಸರ್ಕಾರದ ವಿಮಾ ಶಾಖೆ

ಬೆಂಗಳೂರು

— ಅಥವಾ —

ಹತ್ತಿರ ಇರುವ ನಮ್ಮ ವಿಮಾ ಏಜೆಂಟರಿಗೆ.

ವುಡ್‌ಲ್ಯಾಂಡ್ ಚಿತ್ರಮನೆ ಜನವರಿಯ 2 ನೇ ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್ — ಶಶಿಕಲಾ ಪಾತ್ರವಹಿಸಿರುವ

ನೌದೊಗ್ಗಾರ = Nau Do Gyara

ಅತ್ಯಮೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ— ಯಶಸ್ವಿ 5 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೀಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 19—1—58 ರಿಂದ

ಕೋಟೀಶ್ವರನ್ (ತಮಿಳು) [ದಿನ 3 ಆಟಗಳು]

ಬೆಂಗಿನ ಪ್ರದರ್ಶನ 10—30 ಕ್ಕೆ — ತಾ || 24 ರಿಂದ 3 ದಿವಸಗಳು ಮಾತ್ರ

SIREN OF BAGDAD (Technicolor Picture)

Edited, Printed& Published by Dharma Prachara Nirata M S Krishna Rao, at the Satyavadi Press Chamarajapuram Mysore